<u>ಅಸಲು ದಾವಾ **157/2023**</u> ಪಿ.ಡಬ್ಲ್ಯೂ:- **1**

ದಿನಾಂಕಃ **19-10-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ:- ವಾದಿಗಳ ಪರ ವಕೀಲರಿಂದ:-</u>

ನಾನು ಈ ದಾವೆಯಲ್ಲಿ ವಾದಿ ಆಗಿದ್ದು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದಾಗಿದೆ.

ವಂಶವೃಕ್ಷವನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-1 ಎಂದು, ಮುಟೇಷನ್ ರಿಜಿಸ್ಟರ್ ಅನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-2 ಎಂದು, 3 ಆರ್.ಟಿ.ಸಿ ಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ನಿಪಿ-3 ರಿಂದ 5 ಎಂದು, ದಿಃ 20-03-2023 ರ ಶುದ್ಧ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

1 ಮತ್ತು 2 ನೇ ಪ್ರತಿವಾದಿಯ ಪರ ವಕೀಲರು ಏಕಪಕ್ಷೀಯವಾದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

3 ನೇ ಪ್ರತಿವಾದಿಯ ಪರ ವಕೀಲರು ಹಾಜರಿದ್ದು, ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ. ಪಾಟೀ ಸವಾಲಿಗೆ ಕಾಲಾವಕಾಶ ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.